ಮಂಜೂರಿ ಮಾಡಿದೆ. ಈ ಹಣ ಮಹದೇವ ಟೆಕ್ಸ್‌ಟೈಲ್ ಮಿಲ್‌ಗೆ ಬಿಡುಗಡೆಯಾಗಿದೆ. ಟ್ರಜರಿಯಿಂದ ಬಿಡುಗಡೆಯಾಗಿ, ಅವರಿಗೆ ಜಮಾ ಆಗಿದೆ. ಏತನ್ಮಧ್ಯೆ, ಆ ಡಿವಿಜನಲ್ ಕಮೀಷನರ್‌ರವರು, ಯಾರು ಲಿಕ್ವಿಡೇಟರ್ ಇದ್ದರು, ಅವರು ಒಂದು ಎಕ್ಸ್‌ಟರ್ನಲ್ ಏಜೆನ್ಸಿಯಿಂದ ಆಡಿಟ್ ಮಾಡಿಸಿ, ಯಾವ ಯಾವ ಕಾರ್ಮಿಕರಿಗೆ ಎಷ್ಟೆಷ್ಟು ಕೊಡಬೇಕು, ಈಗೇನು ಅವರು ಕ್ಲೈಮ್ಸ್ ಕೊಟ್ಟಿದ್ದಾರೆ, ಅದು ಸರಿ ಇದೆಯೇ ಹೇಗೆ ಎಂಬುದರ ಬಗ್ಗೆ ಆಡಿಟ್ ಮಾಡಿಸಬೇಕೆಂದು ನಿರ್ಣಯ ಮಾಡಿದ್ದರು. ಆ ಅಂತಿಮ ಆಡಿಟ್ ವರದಿ ಸಹಿತ ಈಗಾಗಲೇ ಸಂಬಂಧಪಟ್ಟ ಲಿಕ್ವಿಡೇಟರ್ ಕೈಯಲ್ಲಿ, ಇನ್‌ಚಾರ್ಜ್ ಡಿವಿಜನಲ್ ಕಮೀಷನರ್ ಕೈಯಲ್ಲಿ ಸಿಕ್ಕಿದೆ. ಬೆಳಗಾಂ ಡಿ.ಸಿ.ಯವರು ಇನ್‌ಚಾರ್ಜ್ ಡಿವಿಜನಲ್ ಕಮೀಷನರ್, ಅವರು ಲಿಕ್ವಿಡೇಟರ್ ಚಾರ್ಜನ್ನು ತೆಗೆದುಕೊಂಡಿದ್ದಾರೆ. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಈ ಸಂಬಂಧ ಪ್ರಶ್ನೆಯನ್ನು ಎತ್ತತಕ್ಕ ಪ್ರಶ್ನೆ ಬಂದಾಗ, ಲೇಟೆಸ್ಟ್ ಪೊಸಿಷನ್ ಏನಾಗಿದೆ ಎಂಬುದನ್ನು ತಿಳಿದುಕೊಳ್ಳಲು ನಮ್ಮ ಕಛೇರಿಯವರಿಗೆ ಹೇಳಿದ್ದೆ. ಇನ್ನು 2-3 ದಿವಸದಲ್ಲಿ ಚಿಕ್‌ಗಳನ್ನು ಕಾರ್ಮಿಕರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಲೇಟ್ ಆದರೂ ಮುಂದಿನ ವಾರದಲ್ಲಿ ಆ ಒಂದು ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತೇವೆ ಆದಷ್ಟು ಬೇಗ ಕಾರ್ಮಿಕರಿಗೆ ಆ ಪರಿಹಾರ ದೊರಕುತ್ತದೆ, 5 ಕೋಟಿ 30 ಲಕ್ಷ ರೂಪಾಯಿಗಳು ಈಗಾಗಲೇ ಮಹದೇವ ಟೆಕ್ಸ್‌ಟೈಲ್ ಮಿಲ್ ನವರಿಗೆ ಜಮಾ ಆಗಿದೆ ಎಂಬ ಮಾಹಿತಿಯನ್ನು ತಮ್ಮ ಮುಖಾಂತರ ಸಂಬಂಧಪಟ್ಟವರಿಗೆ ತಿಳಿಸುತ್ತಿದ್ದೇನೆ.

ವಿಷಯ:– (iii) ಮಂಡ್ಯ ಜಿಲ್ಲೆಯ ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಸಂಬಳ ನೀಡದೇ ಇರುವ ಬಗ್ಗೆ.

ಶ್ರೀ ಎಂ.ಎಸ್. ಆತ್ಮಾನಂದ:– ಪಾಂಡವಪುರ ಸಕ್ಕರೆ ಕಾರ್ಖಾನೆ ಬಗ್ಗೆ ವಿಷಯವನ್ನು ಪ್ರಸ್ತಾಪಿಸಬೇಕಾಗಿದೆ...

ಅಧ್ಯಕ್ಷರು:– ಸಕ್ಕರೆ ಮಂತ್ರಿಗಳು ಸಭೆಯಲ್ಲಿ ಇಲ್ಲ. ಆದರೂ ನೀವು ರೈಸ್ ಮಾಡುವುದಾದರೆ ಮಾಡಿ, ಮತ್ತೆ ನಾಡಿದ್ದು ನೀವು ಮಾತನಾಡಕೂಡದು. ಬರೀ ಉತ್ತರ ಮಾತ್ರ ಹೇಳುತ್ತಾರೆ. ಈ ಕಂಡೀಷನ್‌ಗೆ ನೀವು ಒಪ್ಪಿದರೆ ಮಾತನಾಡಿ.

ಶ್ರೀ ಎಂ.ಎಸ್. ಆತ್ಮಾನಂದ:– ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಇದ್ದು, ಇದು ನಮ್ಮ ಜಿಲ್ಲೆಯ ಸಹಕಾರಿ ರಂಗದ ಪ್ರಥಮ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ರಾಜ್ಯದಲ್ಲಿ ಒಂದು ಪ್ರತಿಷ್ಠಿತ ಸಹಕಾರಿ ಸಕ್ಕರೆ ಕಾರ್ಖಾನೆ ಆಗಿತ್ತು. ಹೀಗೆ ರೈತರಿಗೆ ವರಪ್ರದಾನವಾಗಿ, ಕಾಮಧೇನುವಾಗಿ ಇದ್ದಂಥಾದ್ದು ಕಳೆದ ಎರಡು ಮೂರು ವರ್ಷಗಳಿಂದ ಇದರ ಕಾರ್ಯವೈಖರಿ ತುಂಬಾ ಅಧೋಗತಿಗೆ ಇಳಿದಿದೆ. ಇವತ್ತು ಕಾರ್ಮಿಕರಿಗೆ ಸಂಬಳ ಕೊಡದೇ ಇರತಕ್ಕ ಪರಿಸ್ಥಿತಿಗೆ ತಲುಪಿರುತ್ತದೆ. ಕಾರ್ಮಿಕರು ಕಳೆದ ಒಂದು ವಾರದಿಂದಲೂ ಕೂಡ ತಮ್ಮ 6-7 ತಿಂಗಳ ವೇತನ ಪಾವತಿಗಾಗಿ ಮುಷ್ಕರ ನಿರತರಾಗಿದ್ದಾರೆ. ಇಷ್ಟೇ ಅಲ್ಲ, ರೈತರ ಕಬ್ಬನ್ನು ಅರೆಯಲು ಇಷ್ಟೊತ್ತಿಗೆ ಕಾರ್ಖಾನೆ ಪ್ರಾರಂಭವಾಗಬೇಕಾಗಿತ್ತು. ಆದರೆ, ಕಾರ್ಖಾನೆ ಪ್ರಾರಂಭವಾಗದೇ ರೈತರು ಬೆಳೆದು ನಿಂತ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡದೇ ಇರತಕ್ಕಂಥ ಅಶಕ್ತ ಪರಿಸ್ಥಿತಿಯಲ್ಲಿದ್ದಾರೆ. ಈ ಕಾರ್ಖಾನೆಯ ಸ್ಥಿತಿ ಬಹಳ ಹದಗೆಟ್ಟಿರತಕ್ಕ ವಿಚಾರವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಸರ್ಕಾರವೂ ಕೂಡ ಈಗಾಗಲೇ ಅನೇಕ ಸಹಾಯ

ಹಸ್ತವನ್ನು ನೀಡಿದ್ದರೂ ಈ ಕಾರ್ಖಾನೆ ಪದೇ ಪದೇ ರೋಗಗ್ರಸ್ಥವಾಗಿರತಕ್ಕ ವಿಚಾರದಲ್ಲಿ, ಸರ್ಕಾರ ಈ ಕಾರ್ಖಾನೆ ಸಂಪೂರ್ಣವಾಗಿ ಈ ಒಂದು ಹಂತಕ್ಕೆ ಬರಲು ಕಾರಣವೇನು, ಈ ಸ್ಥಿತಿಗತಿಗೆ ಬರಲು ಕಾರಣವೇನು ಎಂಬ ವಿಚಾರದಲ್ಲಿ ಒಂದು ಏನ್‌ಕ್ವೈರಿಯನ್ನು ಮಾಡಬೇಕು. ಈ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಮತ್ತು ಕಾರ್ಖಾನೆ ನೌಕರರ ಮುಷ್ಕರವನ್ನು ಸಮಾಪ್ತಿ ಮಾಡುವುದಕ್ಕೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕೆಂದು, ತಮ್ಮ ಮೂಲಕ ಸಹಕಾರಿ ಸಚಿವರಲ್ಲಿ ಒತ್ತಾಯಪೂರ್ವಕವಾಗಿ, ಆಗ್ರಹಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇನೆ.

## 4. ವರದಿಯನ್ನೊಪ್ಪಿಸುವುದು

ಉಪಾಧ್ಯಕ್ಷರು:– ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಅಧ್ಯಕ್ಷನಾಗಿ, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಒಂಭತ್ತನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷಕರು:– ವರದಿ ಒಪ್ಪಿಸಲಾಯಿತು.

## 5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– **(iv) ಆಲಮಟ್ಟಿ ಜಲಾಶಯದಲ್ಲಿ ಸಂಗ್ರಹಿಸಿರುವ ನೀರನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ.**

ಶ್ರೀ ಪಿ. ಹೆಚ್. ಪೂಜಾರ್ (ಬಾಗಲಕೋಟೆ):– ಸನ್ಮಾನ್ಯ ಅಧ್ಯಕ್ಷರೇ, ಪ್ರಸಕ್ತ ವರ್ಷ ಆಲಮಟ್ಟಿ ಜಲಾಶಯದಲ್ಲಿ 519.6 ರವರೆಗೆ ನೀರನ್ನು ಹಿಡಿದಿಡತಕ್ಕ ಅಧಿಸೂಚನೆಯನ್ನು ಸರ್ಕಾರದಿಂದ ಅಲ್ಲಿಯ ಚೀಫ್ ಇಂಜಿನಿಯರುಗಳಿಗೆ ಬಿ.ಟಿ.ಡಿ. ಅಧಿಕಾರಿಗಳಿಗೆ, ಸುವ್ಯವಸ್ಥೆ ಆಯುಕ್ತರಿಗೆ ಈಗಾಗಲೇ ಕಳುಹಿಸಲಾಗಿದೆ. ಹೋದವರ್ಷ ಕೂಡ ಇದೇ ರೀತಿಯ ಸಂಧಿಗ್ಧ ಪರಿಸ್ಥಿತಿ ಉಂಟಾಗಿತ್ತು. ಇಲ್ಲಿ ಅಬ್ಸರ್ವ್ ಮಾಡುವಂಥಾದ್ದು ಒಂದು. ಆ ಕಡೆ ಪುನರ್ ವಸತಿ ಕೇಂದ್ರದ ವ್ಯವಸ್ಥೆ ಇನ್ನೂ ಸರಿಯಾಗಿ ಇಲ್ಲ. ಅದರ ಜೊತೆಗೆ ಈ ಹಿಡಿದಿಟ್ಟಂಥ ನೀರನ್ನು ಉಪಯೋಗ ಮಾಡುವಂಥ ವ್ಯವಸ್ಥೆಯಲ್ಲಿ ಕಾಲುವೆಗಳು ಕೂಡ ಇನ್ನೂ ಪೂರ್ತಿಯಾಗಿಲ್ಲ. ಇದನ್ನು ನಾನೂ ಕೂಡ ಪರಿಶೀಲನೆ ಮಾಡಿ ಬಂದಿದ್ದೇನೆ. ಈ ದಿಸೆಯಲ್ಲಿ ಸರ್ಕಾರದ ತೀರ್ಮಾನ ಏನು? ಪ್ರತಿವರ್ಷ ಅಲ್ಲಿಯ ಜನರಿಗೆ ನೀರು ನಿಲ್ಲಿಸುವಂಥ ಭಯ ಇದೆ. ಪುನರ್ ವಸತಿ ಕೇಂದ್ರಗಳಿಗೆ ಹೋಗಲು ಆ ವ್ಯವಸ್ಥೆ ಸರಿಯಾಗಿಲ್ಲ. ಈ ಕಾಲುವೆಗಳ ವ್ಯವಸ್ಥೆಯೂ ಸರಿಯಾಗಿಲ್ಲ. ಹಿಡಿದಿಟ್ಟಂಥ ನೀರನ್ನು ಉಪಯೋಗ ಮಾಡುವಂಥ ಸ್ಥಿತಿಯಲ್ಲಿ ಸರ್ಕಾರ ಇದೆಯೇ ಈ ಅಧಿಸೂಚನೆಯನ್ನು ಸರ್ಕಾರ ಹೊರಡಿಸಿ, ಇದಕ್ಕೆ ಸರ್ಕಾರ ಬದ್ಧವಾಗಿದೆಯೇ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಲು ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ(ಜಲ ಸಂಪನ್ಮೂಲ ಸಚಿವರು):– ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಪೂಜಾರ್‌ರವರು ಹೊಸ ವಿಚಾರವನ್ನೇನೂ ಕೇಳಬಯಸಿಲ್ಲ. ಈಗಾಗಲೇ ಸರ್ಕಾರ ಏನು ನಿರ್ಣಯ ಮಾಡಿದೆ, ಆ ನಿರ್ಣಯವನ್ನು ಅವರಿಗೆ ಮತ್ತೆ ನೆನಪು ಮಾಡಿಕೊಡುತ್ತೇನೆ. ತಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಸರ್ಕಾರ 519.6 ರವರೆಗೆ ನೀರನ್ನು ನಿಲ್ಲಿಸಬೇಕೆಂದು ನಿರ್ಣಯ ಮಾಡಿದೆ. ಅಧ್ಯಕ್ಷರೇ, ತಮ್ಮ ಪರವಾನಗಿ ಇದ್ದರೆ, ಈ ವಿವರವಾದ ಉತ್ತರವನ್ನು ಓದುತ್ತೇನೆ.